ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156
(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)
(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

# KITTURU RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-UShA (MERU)
*(Formerly known as 'Rani Channamma University, Belagavi')*

E-mail:registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234

ಸಂ: ಕಿರಾಚವಿ/ಬೆಳಗಾವಿ/ಕುಸಕಾ/ರೆಡ್ ಕ್ರಾಸ್/2026-27/ 2185 ದಿನಾಂಕ: 22 JUL 2026

## ಸುತ್ತೋಲೆ:

**ವಿಷಯ:** ಯುವ ರೆಡ್ ಕ್ರಾಸ್ ಶುಲ್ಕ ರೂ.50/- ಗಳನ್ನು UUCMS ಮೂಲಕ ಪಾವತಿಸುವ ಕುರಿತು.

ಈ ಮೂಲಕ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಯ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಸುವುದೇನೆಂದರೆ, ಪ್ರತಿಯೊಂದು ಮಹಾವಿದ್ಯಾಲಯವು ಯುವ ರೆಡ್ ಕ್ರಾಸ್ ಘಟಕವನ್ನು ಹೊಂದುವುದು ಕಡ್ಡಾಯವಾಗಿರುತ್ತದೆ. (ಸರ್ಕಾರದ ಸುತ್ತೋಲೆ ಲಗತ್ತಿಸಿದೆ) ಅದರಂತೆ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕೆಲವು ಸಂಯೋಜಿತ ಮಹಾವಿದ್ಯಾಲಯಗಳು ಮಾತ್ರ ನೋಂದಣಿ ಮಾಡಿಕೊಂಡಿದ್ದು ಗಮನಕ್ಕೆ ಬಂದಿದ್ದು, ನೋಂದಣಿ ಮಾಡಕೊಳ್ಳದ ಮಹಾವಿದ್ಯಾಲಯಗಳು ರೂ.1500/- ಗಳನ್ನು Indian Red Cross Society ಇವರ ಹೆಸರಿಗೆ ಡಿ.ಡಿ. ಮೂಲಕ ಪಾವತಿಸಿ ತಪ್ಪದೆ ನೋಂದಣಿ ಮಾಡಿಕೊಂಡು **ಪ್ರಧಾನ ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ,#26, ರೆಡ್ ಕ್ರಾಸ್ ಭವನ,ಮೊದಲನೇ ಮಹಡಿ, ರೇಸ್ ಕೋರ್ಸ ರಸ್ತೆ, ಬೆಂಗಳೂರು ಮತ್ತು ಕುಲಸಚಿವರು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ಮಾಹಿತಿಯನ್ನು ತಪ್ಪದೇ ಸಲ್ಲಿಸಲು ಸೂಚಿಸಿದೆ.**

2026-27ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಸಮಯದಲ್ಲಿ UUCMS ಮೂಲಕ ರೆಡ್ ಕ್ರಾಸ್‌ಶುಲ್ಕ ರೂ. 50/- ಗಳನ್ನು ಪಾವತಿಸಿರುತ್ತಾರೆ, ಆದ್ದರಿಂದ ಮಹಾವಿದ್ಯಾಲಯದವರು ರೆಡ್‌ಕ್ರಾಸ್‌ಶುಲ್ಕ ರೂ. 50/- ಗಳನ್ನು ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿ ತೆಗೆದುಕೊಳ್ಳಬಾರದೆಂದು ಈ ಮೂಲಕ ತಿಳಿಸಿದೆ.

ವಿದ್ಯಾರ್ಥಿಗಳು UUCMS ಮೂಲಕ ಪಾವತಿಸಿದ ರೆಡ್‌ಕ್ರಾಸ್ ಶುಲ್ಕ ರೂ. 50/- ಗಳಲ್ಲಿ ರೂ. 15/- ಗಳನ್ನು ವಿಶ್ವವಿದ್ಯಾಲಯವು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ, ಕರ್ನಾಟಕ ಶಾಖೆಗೆ ಪಾವತಿಸಲಾಗುವುದೆಂದು ಈ ಮೂಲಕ ತಿಳಿಸಿದೆ, ಮುಂದುವರೆದು, ಪ್ರವೇಶ ಪಡೆದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯ ಮಾಹಿತಿಯನ್ನು ಮಹಾವಿದ್ಯಾಲಯದವರು ನೀಡುವುದು.

ಮಹಾವಿದ್ಯಾಲಯದಲ್ಲಿ ಉಳಿದ ರೂ.35/- ಗಳಿಗೆ ಸಂಬಂಧಿಸಿದಂತೆ ಮಹಾವಿದ್ಯಾಲಯದವರು ಕಾರ್ಯಕ್ರಮ ಆಯೋಜಿಸಿದ ಮಾಹಿತಿ ವಿದ್ಯಾರ್ಥಿಗಳ ಪಟ್ಟಿ, ವರದಿ ಮತ್ತು ಬಿಲ್ಲುಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದಲ್ಲಿ ನಂತರ ಮೊತ್ತವನ್ನು ವಿಶ್ವವಿದ್ಯಾಲಯವು ಮಹಾವಿದ್ಯಾಲಯಕ್ಕೆ ಪಾವತಿಸುವುದು ಎಂದು ಈ ಮೂಲಕ ತಿಳಿಸಿದೆ.

ರೆಡ್‌ಕ್ರಾಸ್ ನೋಂದಣಿಯಾಗಿರುವ ಎಲ್ಲ ಮಹಾವಿದ್ಯಾಲಯಗಳು 2026-27ನೇ ಶೈಕ್ಷಣಿಕ ಸಾಲಿಗೆ ಮಹಾವಿದ್ಯಾಲಯಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳ ತಾತ್ಕಾಲಿಕ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಅಂದಾಜು ಆಯವ್ಯಯ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ಕುಲಸಚಿವರ ಕಾರ್ಯಾಲಯ ಬೆಳಗಾವಿ

ಸಂತೋಷ ಕಾಮಗೌಡ ಕೆ.ಎ.ಎಸ್.
**ಕುಲಸಚಿವರು**
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

ಇವರಿಗೆ,

1 ಪ್ರಾಚಾರ್ಯರು, ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಯ ಸಂಯೋಜಿತ ಮಹಾವಿದ್ಯಾಲಯಗಳು.